**ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ, ನವಲಗುಂದ.**

**ಸಿ. ಸಿ. ನಂಃ 717/2024**

ಪಿ.ಡಬ್ಲ್ಯೂ- **3**
ಸಿ.ಡಬ್ಲೂ- **3**

| | | |
|---|---|---|
| ಹೆಸರು | ಃ- | ಹನುಮಂತಪ್ಪ ಆಸಂಗಿ |
| ತಂದೆ / ಗಂಡನ ಹೆಸರು | ಃ- | ಯಲ್ಲಪ್ಪ |
| ವಯಾ | ಃ- | 30 ವರ್ಷ |
| ಉದ್ಯೋಗ | ಃ- | ಪುರಸಭೆಯ ವಾಹನ ಚಾಲಕ |
| ವಾಸಸ್ಥಳ | ಃ- | ನವಲಗುಂದ |
| ಸತ್ಯ ಪ್ರತಿಜ್ಞೆ ಮೇರೆಗೆ | ಃ- | ದಿನಾಂಕಃ 08-07-2025. |

*ಮುಖ್ಯ ವಿಚಾರಣೆ ಃ- ಶ್ರೀ ಸ.ಸ.ಅ. ರವರಿಂದ ಃ*

1) ಪ್ರಕರಣದ 1 ನೇ ಆರೋಪಿತನು ಕಾರಾಗೃಹದಿಂದ ವಿಸಿ ಮೂಖಾಂತರ ನ್ಯಾಯಾಲಯದ ಎದುರು ಹಾಜರಾಗಿದ್ದು ಸಾಕ್ಷಿಯು ಆರೋಪಿತನನ್ನು ನೋಡಿ ಪರಿಚಯವಿರುವುದಿಲ್ಲ ಎಂದು ನುಡಿಯುತ್ತಾರೆ. ಚಾಸಾ-1 ಹಾಗೂ ಚಾಸಾ-2 ರವರ ಪರಿಚಯವಿದೆ.

2) 2023 ನೇ ಇಸವಿಯ 11 ನೇ ತಿಂಗಳಿನಲ್ಲಿ ನಾನು ನನ್ನ ಮನೆಯಿಂದ ಕರ್ತವ್ಯಕ್ಕೆ ತೆರಳಲು ಬೆಳಗ್ಗೆ ಸುಮಾರು 05-30 ಗಂಟೆಗೆ ಹೊರಟಿರುತ್ತೇನೆ. ಮದ್ಯಾಹ್ನ 02-00 ಗಂಟೆಗೆ ಮನೆಗೆ ಬಂದ ಸಮಯದಲ್ಲಿ ನವಲಗುಂದದ ಅಂಬೇಡ್ಕರ ನಗರದಲ್ಲಿ ಜನಸಂದನಿಯಾಗಿದ್ದು, ಜನರಲ್ಲಿ ಕೇಳಲಾಗಿ ಚಾಸಾ-1 ರವರ ಮನೆಯಲ್ಲಿ ಕಳ್ಳತನವಾದ ಬಗ್ಗೆ ತಿಳಿದು ಬಂದಿರುತ್ತದೆ.

3) ನಂತರ ಸಂಜೆ ಪೊಲೀಸರು ಅಲ್ಲಿಗೆ ಬಂದು ಚಾಸಾ-1 ರವರ ಮನೆಯ ಒಳಗೆ ನಾನು ಮತ್ತು ಪೊಲೀಸರು ಹೋಗಿ ನೋಡಲಾಗಿ ಅವರ ಮನೆಯ ಟ್ರೆಜೊರಿ ಮುರಿದು ಕಂಡು ಬಂದಿದ್ದು, ಅಲ್ಲಿ ಛಾಯಾಚಿತ್ರವನ್ನು ತೆಗೆದಿರುತ್ತಾರೆ. ನಂತರ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ.

4) ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿ ಅದರಲ್ಲಿ ಸಾಕ್ಷಿಗೆ ತನ್ನ ಸಹಿ ಎಲ್ಲಿ ಇದೆ ಎಂದು ಗುರುತಿಸಲು ಕೇಳಲಾಗಿ ಸಾಕ್ಷಿಯು ನಿಪಿ-2 ರ ಮೇಲೆ ತಮ್ಮ ಸಹಿಯನ್ನು ಗುರುತಿಸುತ್ತಾರೆ. ಸದರಿ ದಾಖಲೆಯು ಘಟನಾ ಸ್ಥಳದ ಪಂಚನಾಮೆಯಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.2(ಸಿ) ಎಂದು ಗುರುತಿಸಲಾಯಿತು. ನಂತರ ನನಗೆ ಗೊತ್ತಿಲ್ಲ.

*(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಎಂದ ಮಾನ್ಯ ಸ ಸ ಅ ರವರು ಕೋರಿದ್ದರಿಂದ, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀಸವಾಲಿಗೆ ಅನುಮತಿಯನ್ನು ನೀಡಲಾಯಿತು.)*

***ಪಾಟೀಸವಾಲು ಃ ಮಾನ್ಯ ಸ ಸ ಅ ರವರಿಂದ ಃ -***

1) ನಾನು ಈ ಮೇಲೆ ಹೇಳಿದ ಸಹಿಯನ್ನು ದಿನಾಂಕ 01-11-2023 ರಂದು ಸಂಜೆ ಸುಮಾರು 04-30 ರಿಂದ 05-30 ಗಂಟೆ ಸಮಯದಲ್ಲಿ ಚಾಸಾ-1 ರವರ ಮನೆಯಲ್ಲಿ ಮಾಡಿರುತ್ತೇನೆ ಎಂದರೆ ಸರಿ. ನಾನು ಸಹಿ ಮಾಡುವ ಸಮಯದಲ್ಲಿ ಚಾಸಾ-2 ರವರು ಸಹ ಇದ್ದು ಸಹಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಸಮಯದಲ್ಲಿ ಛಾಯಾಚಿತ್ರವನ್ನು ತೆಗೆದಿರುತ್ತಾರೆ ಎಂದರೆ ಸರಿ. ನಾನು ಸಹಿ ಮಾಡಿದ ದಾಖಲೆಯ ಮೇಲೆ ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ.

**ಪಾಟೀಸವಾಲು 1 ನೇ ಆರೋಪಿ ಪರ ಃ ಶ್ರೀ.ಸಿ.ಎಂ.ಪಿ ವಕೀಲರಿಂದ -(LADC)**

1) ನನ್ನ ಕರ್ತವ್ಯದ ಸಮಯ ಬೆಳಗ್ಗೆ 05-30 ರಿಂದ ಮದ್ಯಾಹ್ನ 02-00 ಗಂಟೆಯವರೆಗೆ ಇರುತ್ತದೆ. ನಂತರ ಕರೆ ನೀಡಿದರೆ ಕರ್ತವ್ಯಕ್ಕೆ ಹೊಗುತ್ತೇನೆ. ಚಾಸಾ-1 ರವರು ನನ್ನ ಸಂಬಂದಿಕರು. ಪೊಲೀಸರು ಸಹಿ ಮಾಡಲು ಹೇಳಿದ ಕಾರಣ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾನು ಪೊಲೀಸರಿಗೆ ಯಾವುದೇ ಮಾಹಿತಿ ನೀಡಿಲ್ಲ.

2) ಘಟನಾ ಸ್ಥಳದ ಚಕಬಂದಿಯನ್ನು ಹೇಳಲು ಬರುವುದಿಲ್ಲ. ಪೊಲೀಸರು ಸಾಕ್ಷಿಗೆ ಸಹಿ ಮಾಡಲು ಹೇಳಿದ ಕಾರಣ ನಾನು ಸಹಿ ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿರುತ್ತಾರೆ ನನಗೆ ಓದಿ ಹೇಳಿರುವುದಿಲ್ಲ. ಅವರು ನನ್ನ ಪರಿಚಯದವರು ಆದ ಕಾರಣ ಅವರಿಗೆ ಸಹಾಯ ಮಾಡಲು ಸಹಿ ಮಾಡಿರುತ್ತೇನೆ ಎಂದರೆ ಸರಿ.

ಮರು ವಿಚಾರಣೆ ಃ ಇಲ್ಲಾ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**